

ಕಾನ್ಷಿಯಸ್ ಸೆಡೇಷನ್ ಎಂಬುದು ಸರಳ ಮತ್ತು ವಿಶೇಷ ಬಗೆಯ ಅರಿವಳಿಕೆಯಾಗಿದ್ದು, ಮಕ್ಕಳ ದಂತ ಚಿಕಿತ್ಸೆಯಲ್ಲಿ ಈ ಹೊಸ ತಂತ್ರಜ್ಞಾನ ಒಂದು ವರದಾನ.

■ ಡಾ. ವಿನಯ ಶ್ರೀನಿವಾಸ್

# ಕಾನ್ಷಿಯಸ್ ಸೆಡೇಷನ್

ಹಲ್ಲು ಮತ್ತು ಬಾಯಿಯ ಆರೋಗ್ಯವನ್ನು ಬಾಲ್ಯದಿಂದಲೇ ಸಂರಕ್ಷಿಸಿಕೊಳ್ಳುವುದು ಅತ್ಯಗತ್ಯ. ಹಲ್ಲುಗಳನ್ನು ಸುಸ್ಥಿತಿಯಲ್ಲಿ ಇಡುವುದರ ಮಹತ್ವವನ್ನು ಎಳವೆಯಲ್ಲಿಯೇ ಮಕ್ಕಳಿಗೆ ತಿಳಿಹೇಳುವುದು ಪೋಷಕರ ಕರ್ತವ್ಯ ಕೂಡ. ಆದರೆ ಸಮಸ್ಯೆ ಎದುರಾದಾಗ ದಂತ ವೈದ್ಯರಲ್ಲಿಗೆ ಹೋಗಲು ಮಕ್ಕಳು ಹಿಂಜರಿಯುತ್ತಾರೆ.

ನಿಜ, ದಂತ ಚಿಕಿತ್ಸೆ ಎಂದರೆ ಮಕ್ಕಳಿಗೆ ವಿಪರೀತ ಭಯ. ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳಷ್ಟೇ ಪೋಷಕರೂ ಭಯಭೀತರಾಗಿರುತ್ತಾರೆ. ಇಂತಹ ಮಕ್ಕಳು ಮತ್ತು ಪೋಷಕರನ್ನು ಮನವೊಲಿಸಿ ಚಿಕಿತ್ಸೆಯನ್ನು ನಿರ್ವಹಿಸುವುದು ದಂತ ವೈದ್ಯರಿಗೆ ಆತಂಕದ ಹಾಗೂ ಸಂಕಷ್ಟದ ಕೆಲಸವೇ. ವ್ಯಕ್ತಿ ದಂತ ಚಿಕಿತ್ಸೆ ಎಂದರೆ ಭಯಪಡಲು ಕಾರಣಗಳು ಹಲವು. ಹಿಂದೊಮ್ಮೆ ಅವರೇ ಚಿಕಿತ್ಸೆ ಪಡೆದಾಗಿನ ಅನುಭವ, ಗೆಳೆಯರ ಅಥವಾ ಸಂಬಂಧಿಕರಿಂದ ಆ ಬಗ್ಗೆ ಕೇಳಿದ ಸಂಗತಿಗಳು ಕೆಲವರ ಆತಂಕವನ್ನು ಹೆಚ್ಚಿಸಿದರೆ ಇನ್ನು ಕೆಲವು ಮನೆಗಳಲ್ಲಿ ಎಳವೆಯಲ್ಲಿ

## ಮಕ್ಕಳ ದಂತ ಚಿಕಿತ್ಸೆಯಲ್ಲಿ ವರದಾನ!

ಪೋಷಕರೇ ಮಕ್ಕಳಿಗೆ, ಹಲ್ಲುಗಳನ್ನು ಸರಿಯಾಗಿ ಉಜ್ಜದಿದ್ದಲ್ಲಿ ಹಲ್ಲಿನ ಡಾಕ್ಟರ್ ಬಳಿ ಕರೆದೊಯ್ದು ಹಲ್ಲು ಕೀಳಿಸುವೆ ಎಂದು ಹೆದರಿಸುವುದೂ ಉಂಟು. ಒಟ್ಟಿನಲ್ಲಿ ದಂತ ವೈದ್ಯರು ಎಂದರೆ ಹಲ್ಲು ಕೀಳುವವರು ಎಂದೇ ಬಹುತೇಕರು ತಿಳಿದಿರುತ್ತಾರೆ.

ಮಕ್ಕಳಿಗೆ ಚಿಕಿತ್ಸೆ ಕೊಡುವಾಗ, ಚಿಕಿತ್ಸೆಯ ಜೊತೆಯಲ್ಲಿಯೇ ಅತ್ಯಂತ ಸಹನೆಯಿಂದ ಮಕ್ಕಳ ಮನಸ್ಸನ್ನು ಗೆಲ್ಲುವ ತಂತ್ರಗಳನ್ನೂ ವೈದ್ಯರು ಕರಗತ ಮಾಡಿಕೊಂಡಿರಬೇಕು. ಭಯ ಮತ್ತು ಆತಂಕದಿಂದ ಮಕ್ಕಳ ವರ್ತನೆಯಲ್ಲಿ ಆಗುವ ಬದಲಾವಣೆಗಳನ್ನು ಅರ್ಥೈಸಿಕೊಳ್ಳುವ ತಾಳ್ಮೆ ಅವರಿಗಿರಬೇಕು. ವೈದ್ಯರ ಕಣ್ಣಲ್ಲಿ ಕಣ್ಣಿಟ್ಟು ನೋಡದಿರುವುದು, ಕಾರಣವಿಲ್ಲದೆ ಅಳುವುದು, ಅಪ್ಪ ಅಥವ ಅಮ್ಮನ ಮಡಿಲೇರಿ ಮುಖ ಮುಚ್ಚಿಕೊಳ್ಳುವುದು ಅಥವಾ ಚಿಕಿತ್ಸಾಲಯದಿಂದ ಸೀದಾ ಹೊರಗೆ ಓಡುವುದು ಮೊದಲಾದವು ಚಿಕಿತ್ಸೆಯ ಬಗೆಗಿನ ಭಯದ ಪರಿಣಾಮದಿಂದಲೇ ಎನ್ನುವುದನ್ನು ವೈದ್ಯರು ತಿಳಿದಿರಬೇಕು.

ಇಂತಹ ಮಕ್ಕಳ ಮನವೊಲಿಸಿಕೊಳ್ಳಲು ತಜ್ಞರು ಇಲ್ಲದ ಹರಸಾಹಸ ಮಾಡಬೇಕಾಗುತ್ತದೆ. ಅವರನ್ನು ಪ್ರೀತಿಯಿಂದ ಮಾತನಾಡಿಸುವುದು, ಆಕರ್ಷಕ ಆಟಿಕೆಗಳನ್ನು ಕೊಡುವುದು, ಅವರು ಇಷ್ಟಪಡುವ ಸಂಗೀತವನ್ನು ಕ್ಲಿನಿಕ್‌ನಲ್ಲಿ ಕೇಳಿಸುವುದು ಮೊದಲಾದ ತಂತ್ರಗಳು ಮಕ್ಕಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ನೆರವಾಗಬಹುದು. ಒಮ್ಮೊಮ್ಮೆ ಈ ಎಲ್ಲ ತಂತ್ರಗಳೂ ವಿಫಲವಾಗಿ ಚಿಕಿತ್ಸೆ ನಡೆಸುವುದೇ ದುಸ್ತರವಾಗುವುದೂ ಇದೆ. ಇಂತಹ ಸನ್ನಿವೇಶಗಳಲ್ಲಿ ಮಕ್ಕಳ ಆತಂಕವನ್ನು ಕಡಿಮೆ ಮಾಡಿ, ನೋವಿನ